S C.R.P.67

| Form No.4 (Criminal) Deposition Sheets (R.P.No.57) |
|---|

## 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

# ಸ್ಪೆಷಲ್ ಕೇಸ್ ನಂಬರ್‌ಃ 66/2025

**ಚಾ.ಸಾ.–1 ಪ್ರಾ.ಸಾ.–1**

| | |
|---|---|
| **ಸಾಕ್ಷಿದಾರರ ಹೆಸರು** | **ವಿಜಯಲಕ್ಷ್ಮಿ ಸಿ ಆರ್** |
| **ತಂದೆಯ ಹೆಸರು** | **ರಾಜು ಬಿ** |
| **ವಯಸ್ಸು** | **28 ವರ್ಷಗಳು** |
| **ಉದ್ಯೋಗ** | **ಗೃಹಿಣಿ** |
| **ವಾಸ** | **ಚಾಮನಹಳ್ಳಿ ಗ್ರಾಮ, ಮದ್ದೂರು ತಾಲ್ಲೂಕು** |

**ದಿನಾಂಕಃ 23.06.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ 2 ನನ್ನ ತಂದೆ . ಚಾಸಾ 3 ಸಹೋದರ. ಚಾಸಾ 4 ರಿಂದ 6 ನಮ್ಮ ಅಕ್ಕಪಕ್ಕದವರು. ಆರೋಪಿತರನ್ನು ನೋಡಿ ಪರಿಚಯ ಇದೆ. ಈಗ ನನಗೆ ತೋರಿಸುತ್ತಿರುವ ದೂರಿನಲ್ಲಿ ಇರುವ ಸಹಿ ನನ್ನದು. ಅದನ್ನು ನಿಪಿ 1 ಎಂದು , ಸಾಕ್ಷಿ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಅದರಲ್ಲಿ ಏನು ಬರೆಯಲಾಗಿದೆ ಗೊತ್ತಿಲ್ಲ. ಪೊಲಿಸ್ ಠಾಣೆಯಲ್ಲಿ ಮಾಡಿದ್ದೇನೆ. ಅದನ್ನು ಡಿಸೆಂಬರ್ 13 , 15 ರಲ್ಲಿ ಮಾಡಿದ್ದೇನೆ. ಅದರಲ್ಲಿ ಏನು ಬರೆಯಲಾಗಿದೆ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸುತ್ತಿರುವ ಮಹಜರಿನಲ್ಲಿ ಇರುವ ಸಹಿ ನನ್ನದು. ಅದನ್ನು ನಿಪಿ 2 ಎಂದು , ಸಾಕ್ಷಿ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ಅದರಲ್ಲಿ ಏನು ಬರೆಯಲಾಗಿದೆ ನನಗೆ ಗೊತ್ತಿಲ್ಲ. ಈಗ ನನಗೆ ತೋರಿಸುತ್ತಿರುವ 3 ಭಾವಚಿತ್ರಗಳಲ್ಲಿ ನಾನು

ಕಂಡುಬರುತ್ತೇನೆ. ಅವುಗಳನ್ನು ನಿಪಿ 3 ಎಂದು ಗುರುತಿಸಲಾಯಿತು. ಅವುಗಳನ್ನು ನಮ್ಮ ಮನೆಯ ಬಳಿ ತೆಗೆಯಲಾಗಿದೆ. ಪೊಲೀಸರು ಅಲ್ಲಿ ಬಂದು ಸದರಿ ಭಾವಚಿತ್ರವನ್ನು ತೆಗೆದಿದ್ದಾರೆ. ಯಾವ ವಿಚಾರಕ್ಕೆ ಘಟಗೆ ಸಂಬಂಧಿಸಿದಂತೆ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನಿಂದ ಯಾವುದೆಹೆಚ್ಚಿನ ಮಾಹಿತಿ ಪಡೆದುಕೊಂಡಿಲ್ಲ. ಆರೋಪಿತರ ಮೇಲೆ ಯಾರು ದೂರು ಕೊಟ್ಟಿದ್ದಾರೆ ಏನು ಪ್ರಕರಣ ದಾಖಲಾಗಿದೆ ನನಗೆ ಗೊತ್ತಿಲ್ಲ.

2) ಈಗ ನನಗೆ ತೋರಿಸುತ್ತಿರುವ ದೊಣ್ಣೆ ಬಟ್ಟೆಗಳು ಮತ್ತು ರಟ್ಟಿನ ಬಾಕ್ಸು ಈ ಮೊದಲು ನಾನು ನೋಡಿಲ್ಲ. ಅದು ಯಾರಿಗೆ ಸೇರಿದ್ದು ಅಂತ ಗೊತ್ತಿಲ್ಲ. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157ರ ಪ್ರಕಾರ ಅನುಮತಿ ಕೊಡಲಾಯಿತು.)**

**<u>ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ</u>**

3) ದಿಃ13.11.2024 ರಂದು ರಾತ್ರಿ 8.15 ರಿಂದ 8.30 ಸಮಯದಲ್ಲಿ ನಾನು ಮತ್ತು ನನ್ನ ತಂದೆ ನಮ್ಮ ಮಹದೇಶ್ವರ ಪ್ರಾವಿಜನ್ ಸ್ಟೂಟರಲ್ಲಿ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಿದ್ದಾಗ ಆರೋಪಿ 1 , 2 ಅಲ್ಲಿ ಬಂದು ಜ್ಯೂಸ್ ಕೊಡು ಎಂದು ಕೇಳಿದರು ಎಂದರೆ ಸರಿಯಲ್ಲ. ಆರೋಪಿ 2 ಸಿಗರೇಟು ಕೊಡ್ಲೆ ಎಂದು ಕೇಳಿದರು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಆರೋಪಿ 2 ನ್ನು ಯಾಕಣ್ಣ ಹೀಗೆ ಕೊಡ್ಲೆ ಅಂತಿದಿ ಎಂದು ಕೇಳಿದಕ್ಕೆ ಆರೋಪಿ 2 ಉದ್ದೇಶಿಸಿ ನಾನು ಇದೇ ಊರಿನವರು ನನ್ನ ಬಳಿಯು ಅಂಗಡಿ ಇದೆ. ನಮ್ಮನ್ನೆ ದುಡ್ಡು ಕೇಳುತ್ತೀಯ ಎಂದು ಏಕವಚನದಲ್ಲಿ ಬೈದರು ಎಂದರೆ ಸರಿಯಲ್ಲ. ಆರೋಪಿ 1 , 2 ರವರು ನನಗೆ ಬೋಳಿಮಗನೆ ಸೂಳೆಮಗನೆ ಎಂದು ಬೈದರು ಎಂದರೆ ಸರಿಯಲ್ಲ. ನನ್ನ ಮೈಮೇಲೆಕೈ ಹಾಕಿ ಎಳೆದಾಡಿ ನಾನು ಹಾಕಿದ್ದ ಬಟ್ಟೆ ಹರಿದು ಹಾಕಿದರು ಮತ್ತು ಮಾನಕ್ಕೆ ಕುಂದುಂಟು ಮಾಡಿದರು ಎಂದರೆ ಸರಿಯಲ್ಲ. ಆರೋಪಿ 1 ಕೈಯಿಂದ ನನ್ನ ತಲೆಗೆ ಹೊಡೆದಿದ್ದಾರೆ ಎಂದರೆ ಸರಿಯಲ್ಲ.

ನಾನುಕೂಗಿದ್ದರಿಂದ ನನ್ನ ತಂದೆ ಹಾಗೂ ತಮ್ಮ ಮನೆಯಿಂದ ಹೊರಗೆ ಬಂದು ಯಾಕೆ ಮಾಡುತ್ತಿದ್ದಿ ಎಂದು ಕೇಳಿದಾಗ ಆರೋಪಿ 1 , 2 ರವರು ನನ್ನ ಸಹೋದರನನ್ನು ಎಳೆದಾಡಿ ಅವರು ಧರಿಸಿದ್ದ ಶರ್ಟನ್ನು ಹರಿದುಹಾಕಿದ್ದಾರೆ ಎಂದರೆ ಸರಿಯಲ್ಲ. ಅಷ್ಟರಲ್ಲಿ ಅಲ್ಲಿಗೆ ಬಂದ 3 ರಿಂದ 10 ನೆ ಆರೋಪಿಗಳು ಆರೋಪಿ 1 , 2 ರವರ ಜೊತೆ ಸಮಾನ ಉದ್ದೇಶದಿಂದ ಗುಂಪುಕಟ್ಟಿಕೊಂಡು ಬಂದು ನನ್ನ ತಂದೆ , ಸಹೋದರನಿಗೆ ಕೈಯಿಂದ ತಲೆ ಮತ್ತು ಮೈಮೇಲೆ ಹೊಡೆದಿದ್ದಾರೆ ಎಂದರೆ ಸರಿಯಲ್ಲ. ನೆಲಕ್ಕೆ ಕೆಡವಿಕೊಂಡು ಕಾಲುಗಳಿಂದ ತುಳಿದು ಸೂಳೆಮಗನೆ ಬೋಳಿಮಗನೆ ಎಂದು ಬೈದಿದ್ದಾರೆ ಎಂದರೆ ಸರಿಯಲ್ಲ. ಆರೋಪಿ 2 ಬಿದಿರುದೊಣ್ಣೆಯಿಂದ ಇದು ನಿನ್ನಿಂದಲೆ ಎಂದು ನನಗೆ ಬೀಸಿದ. ನನ್ನ ಸಹೋದರ ತಡೆದು ದೊಣ್ಣೆಯನ್ನು ಹಿಡಿದುಕೊಳ್ಳಲು ಹೋದಾಗ ಹಣೆಗೆ ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಈ ಬಗ್ಗೆ ಸಾಕ್ಷಿ 4 ರಿಂದ 12 ರವರು ನಮ್ಮನ್ನು ಸಮಾಧಾನ ಮಾಡಿ ಕಳಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ಹೋಗುವಾಗ ನಿಮ್ಮ ಸಂಸಾರದ ಜನರನೆಲ್ಲ ಯಾರಿಗು ಸಿಗದಂತೆ ಕತ್ತರಿಸಿ ಬಿಸಾಕುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಘಟನೆ ಬಗ್ಗೆ ನಾನು ಈಗ ನನಗೆ ಓದಿ ಹೇಳಿದಂತೆ ನಿಪಿ1 ರಂತೆ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ಪೊಲಿಸರು ಸ್ಥಳಕ್ಕೆ ಬಂದು ನಿಪಿ 2 ರಂತೆ ಸ್ಥಳ ಮಹಜರು ಮಾಡಿ ನಿಪಿ 3 ರಂತೆ ಭಾವಚಿತ್ರಗಳನ್ನು ತೆಗೆದರು ಎಂದರೆ ಸರಿಯಲ್ಲ. ಸ್ಥಳವನ್ನು ನಾನೆ ತೋರಿಸಿದ್ದೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ದೊಣ್ಣೆ , ರಟ್ಟಿನ ಬಾಕ್ಸು , ಬಟೆಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆನಂತರ ಪೊಲೀಸರು ದಿಃ 8.1.2025 ರಂದು ವಿಚಾರಣೆ ಮಾಡಿ ನನ್ನ ಮುಂದುವರಿದ ಹೇಳಿಕೆಯನ್ನು ಈಗ ಓದಿ ಹೇಳಿದಂತೆ ಹೇಳಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ4 ಎಂದು ಗುರುತಿಸಲಾಯಿತು. ಆರೋಪಿತರು ನಮ್ಮ ಮೇಲೆ ದೂರು ಕೊಟ್ಟಿರುತ್ತಾರೆ ಎಂದರೆ ಸರಿ. ಅದರ ಸಂಖ್ಯೆ ಎಸ್ ಸಿ 16/25 ಆಗಿರುತ್ತದೆ ಎಂದರೆ ಸರಿ. ನಾವು ಪ್ರಕರಣವನ್ನು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ</u>**

4) ಇಲ್ಲ ಎಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**
5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ, ಮಂಡ್ಯ